ಸದರೀ ಮೈನರಾದ ದೊಡ್ಡವೆಂಕಟಪ್ಪ ಚಿಕ್ಕವೆಂಕಟಪ್ಪ ವೆಂಕಟಮುನಿಯಪ್ಪ ಯಿಂಬವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಸರ್ಜಾಪುರದ ಸ್ಥಳದ ವೆಂಕಟಲಕ್ಷ್ಮಮ್ಮನು ಸದರೀ ಮೈನರುಗಳ ಆಸ್ತಿ ಕಾಪಾಡುವದಕ್ಕೆ ಗಾರ್ಡಿಯರ್ ಆಗಿರುವದಕ್ಕೆ ಸರ್ಟಿಫಿಕೇಟ್ ಬ್ಯಗ್ಗೆ ಅರ್ಜೀ ಕೊಟ್ಟು ಇರುತ್ತಾಳೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1884ನೇ ಇಸವಿ ಡಿಶಂಬರು ತಾರೀಖು 22ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸಿ. ಕೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ನಂ. 10 ತಾರೀಖು 27ನೇ ನವಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಅರಕಲ್‌ಗೂಡು ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರಾಗಲಿ ಈ ನೋಟೀಸ್ ತಾರೀಖು ಲಾಗಾಯತು ಬಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನು ವಾಪಸ್ ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ನಂಬರು.	ದಸ್ತಾವೇಜು ಬರೆದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆಸಿಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಪಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
74 ——— 1881—82	ಮರೂರು ಗ್ರಾಮದಲ್ಲಿರುವ ಶ್ರೀವೈಷ್ಣವ ಬ್ರಾಹ್ಮಣ ಶ್ರೀನಿವಾಸಯ್ಯನವರ ಮಗ ರಾಮಸ್ವಾಮಿ 1 ವೆಂಕಟಾಚಾರ್ಯ 1	ಮರೂರು ಗ್ರಾಮದಲ್ಲಿ ಇರುವ ಸಾಂತರಾಜೆ ಅರಸಿನವರ ಮಗ ಚಿಕ್ಕ ಅರಸು	3—6—81	3—6—81	75 ರೂಪಾಯಿನ ಜಮೀರ್ ಸಂಬಂಧವಾದ ಭೋಗ್ಯ ಪತ್ರ.
75 ——— ಡಿಟೋ	ರಾಮನಾಥಪುರದಲ್ಲಿರುವ ಸಂಕೇತಿಬ್ರಾಹ್ಮಣ ನರಸಿಂಹ್ಮವಧಾನಿಗಳ ಮಗ ರಾಮಾವಧಾನಿ	ಅರಕಲ್‌ಗೂಡು ತಾಲ್ಲೂಕು ಕಜೇರಿ	4—6—81	4—6—81	302 ರೂಪಾಯಿನ ಜಾಮೀರ್ ಮುಚ್ಚಳಿಕೆ ಮೊಬಲಗ್ಯೆ ಭೂಸ್ಥಿತಿ ಯೀಡು ಮಾಡಿರುವದಾಗಿ.
125 ——— ಡಿಟೋ	ಸರ್ವ ಮಾನ್ಯ ಮೂಯಿ ಗೌಡನಹಳ್ಳಿಲ್ಲಿರುವಪಂಚಾಳದ ಜಾತಿಕೊಟ್ಟೂರಯ್ಯನಮಗ ಬಡಾಇ ಕಸಬಿನಿಂದ ಜೀವಿಸುವ ವೀರಾಚಾರಿ	ಹಾಡ್ಯ ಗ್ರಾಮದಲ್ಲಿರುವ ಶಿವಾಚಾರದ ದೊಡ್ಡ ಹಟ್ಟಿಯ ಚಿಕ್ಕನ್ನವೀರಪ್ಪನ ಮಗ ಆರಂಬದ ಕಸಬಿನ ವೀರಭದ್ರಯ್ಯ	9—7—81	9—7—81	95 ರೂಪಾಯಿನ ಭೂಸ್ಥಿತಿ ಕ್ರಯ ಪತ್ರ.

ನಂ. 11. ತಾರೀಖು 6ನೇ ಡಿಶಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಸಬ್ ರಿಜಿಸ್ಟ್ರಿ ಆಫಿಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೈವಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಪೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟಿಸ್ ತಾರೀಖು ಲಾಗಾಯತು 1 ತಿಂಗಳ ವೊಳಗಾಗಿ ಸಬ್ ರಿಜಿಸ್ಟ್ರಾರ್ರ ರೂಬರೂ ಹಾಜರಾಗಿ ಅವುಗಳನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನು ಬರಸಿಕೊಂಟ್ಟವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
114 82—83	ಮೈಸೂರು ಮಂಡಿ ಮಹೆಲಾದಲ್ಲಿ ಇರುವ ದೇವಾಂಗದ ಜಾತಿ ಜವಳಿ ವ್ಯಾಪಾರದ ದುಂಡಿಯ್ಯನ ಮಗ ರಂಗಣ್ಣ.	ಮೈಸೂರು ಲಷ್ಕರ್ ಮೊಹಲ್ಲೇಲಿರುವ ದೇವಾಂಗದ ಜಾತಿ ಜವಳಿ ವ್ಯಾಪಾರದ ಚಿಕ್ಕತಿಂಮಯ್ಯನ ಮಗ ದಾಸಣ್ಣ.	30—5—82	2—6—82	75 ರೂಪಾಯಿನ ಮನೆ ಆದಾರದ ಪತ್ರ.
636 81—82	ಮೈಸೂರು ಇಟ್ಟಿಗೆ ಗೂಡಿನಲ್ಲಿ ಇರುವ ಪಂಚಾಳದ ಜಾತಿ ಕಾತಮೇಸ್ತ್ರಿ ಮಕ್ಕಳು ಚಾ ಮುಂಡಾಚಾರಿ, ಕಿರೀ ಮಗ ಲಷ್ಕ್ರಣಾಚಾರಿ, ಮಧ್ಯೆಮಗ ನಾರಣಾಚಾರಿ.	ಮೈಸೂರು ಇಟ್ಟಿಗೆ ಗೂಡಿನಲ್ಲಿ ಇರುವ ಪಂಚಾಳದ ಜಾತಿ ಕಾತಮೇಸ್ತ್ರಿ ಮಕ್ಕಳು ಚಾ ಮುಂಡಾಚಾರಿ ಕಿರಿಮಗ ಲಕ್ಷ್ಮಣಾಚಾರಿ ಮಧ್ಯೆ ಮಗ ನಾರಣಾಚಾರಿ.	20—1—82	23—1—82	90 ರೂಪಾಯಿನ ಸ್ಥಿತಿ ಹಂಜಿ ಕೊಂಡ ವಿಭಾಗ ಪತ್ರ.
738 81—82	ಮೈಸೂರು ಜೊಸಲಗ್ರಹಾರದಲ್ಲಿ ಇರುವ ವಿಷ್ಣುವರ್ಧನ ಜಾತಿ ನಕ್ಕಳದ ಜನ್ನಪ್ಪನ ಮಗ ಅರಮನೆ ಚಾಕರಿವೆಳ್ಳ ನಂಜಪ್ಪ.	ಅಸಿಸ್ಟೆಂಟ್ ಕಮ್ಮಿಷ್ಣರ್ ಕೃಷ್ಣಸ್ವಾಮಯ್ಯಂಗಾರ್ರ ಮಕ್ಕಳು ಎಂ. ಬಿ. ರಾಮಸ್ವಾಮಯ್ಯಂಗಾರ್.	7—3—82	9—3—82	450 ರೂಪಾಯಿನ ಹೆಂಚಿನ ಅಂಗಡಿ ವಗೈರೆ ಕ್ರಯಪತ್ರ.
799 81—82	ಮೈಸೂರು ಶ್ರೀರಾಂ ಪೇಟೇಲಿರುವ ವೆಂಕಟರಮಣಯ್ಯನ ಮಗ ಲೇಟ್ ಅಷ್ಟಗ್ರಾಂ ಡಿವಿಜ್ ಸೆರ್ಷ್ ಕೋರ್ಟು ಅಸಿಸ್ಟೆಂಟ್ ರಿಕಾರಡ್ ಕೀಪರ್ ಸಿ. ಸುಬ್ಬರಾವ್	ಮೈಸೂರು ಶ್ರೀರಾಂ ಪೇಟೇಲಿರುವ ವೈಶ್ಯರ ನಾಭಾವೆಂಕಟೇಶಯ್ಯನ ಮಗ ವಸಾರಿ ಅಂಗಡಿ ವೈಶ್ಯರ ನಾಭಾನಾರಣಶೆಟ್ಟಿ.	23—3—82	29—3—82	ತಿಂಗಳು 1ಕ್ಕೆ 3—12—0 ನೇರಿಗೆ 4 ವರುಷಕ್ಕೆ ಹುಟ್ಟಿದ ಮನೆ ಭಾಡಾ ದಸ್ತ್ರೈವಜ್.

ಅಬ್ದುಲ್‌ಖಾದರ್, ಕೆ. ಬಿ.
ರಿಜಿಸ್ಟ್ರಾರ್.

ನಗರ ಡಿವೀರ್ಜ.

ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 123.

ಮೃತಪಟ್ಟ ತಮ್ಮಣ್ಣ ಹೆಗ್ಗಡೆಯ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಐಯ್ಯಂಣನು, ಮೃತಪಟ್ಟ ಸದರೀ ತಮ್ಮಂಣ ಹೆಗ್ಗಡೆಗೆ ಸಹೋದರನ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೊಪ್ಪ ತಾಲ್ಲೂಕು ಹೊನ್ನವಳ್ಳಿ ಸ್ಥಳದ ಐಯ್ಯಂಣನು ಸದರೀ ಹೊನ್ನವಳ್ಳಿ ವಾಸಸ್ಥನಾಗಿ ಮೃತಪಟ್ಟ ತಮ್ಮಂಣ ಹೆಗ್ಗಡೆಯ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿ ಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಐಯ್ಯಂಣನ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಮ್ಮಂಣ ಹೆಗ್ಗಡೆಯ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.